Rotary
ರೋಟರಿ ಐಸಿರಿ ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD



Rtn. Francesco Arezzo
R.I. President



Rtn. K. Palaksha
District Governor

# ಐಶ್ವರ್ಯ

ಸಂಪುಟ: 4 ಸಾಪ್ತಾಹಿಕ ಸಂಚಿಕೆ : 28
ದಿನಾಂಕ: 13.01.2026



Rtn. Anil Kumar
President



Rtn. Krishnappa
Secretary

## ಸಂಭಾವ್ಯ ಸದಸ್ಯರಿಗೆ – ರೋಟರಿ ಬಗ್ಗೆ ಒಂದಷ್ಟು ಮಾಹಿತಿ

ರೋಟರಿ ಇಂಟರ್ನ್ಯಾಷನಲ್ ವಿಶ್ವದ ಅತಿದೊಡ್ಡ ಮತ್ತು ಅತ್ಯಂತ ಪ್ರತಿಷ್ಠಿತ ಸೇವಾ ಸಂಸ್ಥೆಗಳಲ್ಲಿ ಒಂದಾಗಿದೆ. "Service Above Self" (ಸ್ವಾರ್ಥಕ್ಕಿಂತ ಸೇವೆ ಮೇಲು) ಎಂಬ ಧ್ಯೇಯವಾಕ್ಯದೊಂದಿಗೆ ಮಾನವ ಕಲ್ಯಾಣ, ಶಾಂತಿ ಮತ್ತು ಸಮಾಜ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸು ತ್ತಿರುವ ಜಾಗತಿಕ ಸಂಘಟನೆಯೇ ರೋಟರಿ.

1905ರಲ್ಲಿ ಅಮೆರಿಕದ ಚಿಕಾಗೋ ನಗರದಲ್ಲಿ ಪಾಲ್ ಹ್ಯಾರಿಸ್ ಅವರಿಂದ ರೋಟರಿ ಸ್ಥಾಪನೆಯಾಯಿತು. ಸ್ನೇಹ, ವೃತ್ತಿಪರ ನೈತಿಕತೆ ಮತ್ತು ಸಮಾಜ ಸೇವೆಯನ್ನು ಒಗ್ಗೂಡಿಸುವ ಉದ್ದೇಶದಿಂದ ಆರಂಭವಾದ ಈ ಸಂಸ್ಥೆ ಇಂದು ವಿಶ್ವದ 200ಕ್ಕೂ ಹೆಚ್ಚು ದೇಶಗಳಲ್ಲಿ ಲಕ್ಷಾಂತರ ಸದಸ್ಯರನ್ನು ಹೊಂದಿದೆ.

ರೋಟರಿಯ ಪ್ರಮುಖ ಗುರಿ ಸಮಾಜದ ಅಗತ್ಯಗಳನ್ನು ಗುರುತಿಸಿ ಸೇವೆಯ ಮೂಲಕ ಪರಿಹಾರ ಒದಗಿಸುವುದಾಗಿದೆ. ಶಿಕ್ಷಣ, ಆರೋಗ್ಯ, ಸ್ವಚ್ಛತೆ, ಪರಿಸರ ಸಂರಕ್ಷಣೆ, ಕುಡಿಯುವ ನೀರು, ಮಹಿಳಾ ಸಬಲೀಕರಣ, ಯುವ ಅಭಿವೃದ್ಧಿ ಹಾಗೂ ಶಾಂತಿ ನಿರ್ಮಾಣ ಕ್ಷೇತ್ರಗಳಲ್ಲಿ ರೋಟರಿ ಸಕ್ರಿಯವಾಗಿ ಕೆಲಸ ಮಾಡುತ್ತಿದೆ. ವಿಶೇಷವಾಗಿ ಪೋಲಿಯೊ ನಿರ್ಮೂಲನೆ ಅಭಿಯಾನದಲ್ಲಿ ರೋಟರಿಯ ಪಾತ್ರ ಅತೀವ ಮಹತ್ವದ್ದಾಗಿದೆ. "End Polio Now" ಕಾರ್ಯಕ್ರಮದ ಮೂಲಕ ವಿಶ್ವವನ್ನು ಪೋಲಿಯೊ ಮುಕ್ತಗೊಳಿಸುವತ್ತ ರೋಟರಿ ದೊಡ್ಡ ಕೊಡುಗೆ ನೀಡಿದೆ.

ರೋಟರಿ ಕ್ಲಬ್‌ಗಳ ಮೂಲಕ ಸ್ಥಳೀಯ ಮಟ್ಟದಲ್ಲಿ ಸೇವಾ ಯೋಜನೆಗಳನ್ನು ಜಾರಿಗೊಳಿಸಲಾಗುತ್ತದೆ.

ವಿದ್ಯಾರ್ಥಿವೇತನಗಳು, ಆರೋಗ್ಯ ಶಿಬಿರಗಳು, ರಕ್ತದಾನ ಶಿಬಿರಗಳು, ಶಾಲೆಗಳ ಅಭಿವೃದ್ಧಿ, ಗ್ರಾಮೀಣ ಪ್ರದೇಶಗಳ ಸಬಲೀಕರಣ ಇವು ರೋಟರಿಯ ಸೇವಾ ಚಟುವಟಿಕೆ ಗಳಲ್ಲಿವೆ. ಜೊತೆಗೆ ಯುವಕರಿಗಾಗಿ ರೋಟರಾಕ್ಟ್, ಇಂಟರಾಕ್ಟ್, ರೈಲಾ (RYLA) ಮುಂತಾದ ಕಾರ್ಯಕ್ರಮಗಳ ಮೂಲಕ ನಾಯಕತ್ವ ಮತ್ತು ಸೇವಾ ಮನೋಭಾವವನ್ನು ಬೆಳೆಸಲಾಗುತ್ತದೆ.

ವೃತ್ತಿಪರ ನೈತಿಕತೆಯನ್ನು ಉತ್ತೇಜಿಸುವುದು ರೋಟರಿಯ ಮತ್ತೊಂದು ಮುಖ್ಯ ಅಂಶ. "Four–Way Test" ಎಂಬ ನೈತಿಕ ಮೌಲ್ಯಗಳ ಪರೀಕ್ಷೆಯ ಮೂಲಕ ಸತ್ಯ, ನ್ಯಾಯ, ಸೌಹಾರ್ದತೆ ಮತ್ತು ಸಮೂಹ ಹಿತವನ್ನು ರೋಟರಿ ಪ್ರತಿಪಾದಿಸುತ್ತದೆ.

ಸಾರಾಂಶವಾಗಿ, ರೋಟರಿ ಇಂಟರ್ನ್ಯಾಷನಲ್ ಒಂದು ಸೇವಾ ಸಂಸ್ಥೆಯಷ್ಟೇ ಅಲ್ಲ, ಅದು ಮಾನವೀಯ ಮೌಲ್ಯಗಳನ್ನು ಬೆಳೆಸುವ, ಸಮಾಜವನ್ನು ಒಗ್ಗೂಡಿಸುವ ಮತ್ತು ವಿಶ್ವ ಶಾಂತಿಗೆ ಕೈಜೋಡಿಸುವ ಮಹತ್ವದ ಚಳವಳಿಯಾಗಿದೆ. ಸೇವೆಯ ಮೂಲಕ ಬದುಕಿಗೆ ಅರ್ಥ ನೀಡುವ ಪ್ರೇರಣೆಯನ್ನು ರೋಟರಿ ಪ್ರತಿಯೊಬ್ಬ ಸದಸ್ಯನಿಗೂ ನೀಡುತ್ತದೆ.

# ಭಾರತೀಯ ಮಹಿಳೆಯರಲ್ಲಿ ಹೆಚ್ಚುತ್ತಿರುವ ಕ್ಯಾನ್ಸರ್ ಪ್ರಮಾಣ

ಫ್ರಿಜ್‌ನಲ್ಲಿರುವ ವಸ್ತುಗಳನ್ನು ಬೇಗನೆ ಬಳಸಿ ಮುಗಿಸಿ.

ಫ್ರಿಜ್‌ನಲ್ಲಿರುವ ವಸ್ತುಗಳು ಮತ್ತು ಕ್ಯಾನ್ಸರ್ ನಡುವೆ ಏನು ಸಂಬಂಧ..? ಸಂಬಂಧ ಇದೆ.

ಭಾರತೀಯ ಮಹಿಳೆಯರ ಸಾಮಾನ್ಯ ಅಭ್ಯಾಸವೇನು?

◆ ಹಾಲಿನಿಂದ ಮೊಸರು

◆ ಬಟ್ಟರ್‌ನಿಂದ ಸಾಬುದಾಣ

◆ ಪಿಠ್ಠಿನಿಂದ ಸೋಯಾ ಸಾಸ್‌ವರೆಗೆ

◆ ಅವಲಕ್ಕಿ (ಪೊಹಾ)

◆ ರವಾ

◆ ಉಪ್ಪಿನಕಾಯಿ

◆ ಪಾಪಡ್

◆ ಮಸಾಲೆಗಳು

◆ ಒಣಹಣ್ಣುಗಳು

◆ ತರಕಾರಿಗಳು

ಏನೇ ಇರಲಿ —

"ಫ್ರಿಜ್‌ಗೆ ಹಾಕಿ" ಎನ್ನುವುದು ಅಭ್ಯಾಸ.

ಅಷ್ಟೇ ಅಲ್ಲ, ಅರ್ಧ ತಿಂದ ಹಣ್ಣು,

◆ ನಿನ್ನೆ ಉಳಿದಿದ್ದ

■ ಬೇಳೆ,

■ ತರಕಾರಿ,

■ ಚಪಾತಿ — ಎರಡೇ ದಿನ ಹಳೆಯದಾದರೂ ಕೂಡ,

■ ರುಬ್ಬಿದ ಮಸಾಲಾ,

■ ಎಲ್ಲಾ ರೀತಿಯ ಕಾಳುಗಳು,

■ ತೆರೆದ ಮಸಾಲಾ ಪುಡಿ ಪ್ಯಾಕೆಟುಗಳು,

■ ಉಳಿದ ಸಾಫ್ಟ್ ಡ್ರಿಂಕ್ಸ್,

■ ಸಿಹಿ ಪದಾರ್ಥಗಳು —

ಎಲ್ಲವನ್ನೂ ಫ್ರಿಜ್‌ನಲ್ಲೇ ತುಂಬಿ ಇಡುವುದು!

ನೀವು ಅವು ಫ್ರಿಜ್‌ನಲ್ಲಿ 'ಸುರಕ್ಷಿತ'ವಾಗಿವೆ ಎಂದು ಭಾವಿಸುತ್ತೀರಿ.

ಆದರೆ ಇದು ದೊಡ್ಡ ತಪ್ಪು ಕಲ್ಪನೆ.ವಾಸ್ತವದಲ್ಲಿ ಕ್ಯಾನ್ಸರ್ ಉಂಟುಮಾಡುವ ವಾತಾವರಣ ಇಲ್ಲಿಯೇ ಸೃಷ್ಟಿಯಾಗುತ್ತದೆ.

ಹೊರಗೆ ನೋಡಲು ಯಾವುದೇ ಸಂಬಂಧ ಕಾಣಿಸದು.

ಆದರೆ 1000 ಜನರ ಅಧ್ಯಯನದಲ್ಲಿ,

538 ಜನರಲ್ಲಿ ಕ್ಯಾನ್ಸರ್ ಪತ್ತೆಯಾಗಿದೆ,

ಅದರಲ್ಲೂ ಮಹಿಳೆಯರ ಪ್ರಮಾಣ ಹೆಚ್ಚು.

ಹೆಚ್ಚಿನ ಆಶ್ಚರ್ಯವೆಂದರೆ —

ಈ 538 ಮನೆಗಳಲ್ಲೂ ಫ್ರಿಜ್ ಪೂರ್ತಿ ತುಂಬಿ ಗಿಜಿಗುಡುತ್ತಿತ್ತು,

ಮೇಲಿನಂತೆ ತುಂಬಿ ತುಂಬಿ ವಸ್ತುಗಳಿಂದ!

ಮುಖ್ಯ ಸಲಹೆಗಳು:

■ ಫ್ರಿಜ್ ತುಂಬಿಸುವ ಬದಲು ಬೇಕಾದಷ್ಟನ್ನೇ ಖರೀದಿಸಿ.

■ ಇಡ್ಲಿ, ದೋಸೆ, ವಡೆ ಹಿಟ್ಟು — ಆ ದಿನಕ್ಕೆ ಬೇಕಾದಷ್ಟು ಮಾತ್ರ.

ಎಂಟು ದಿನಗಳಿಗೆ ಬೇಡ.

■ ಕಡಲೆಹಿಟ್ಟು,

■ ಜೋಳದ ಹಿಟ್ಟು,

■ ಕಾಳುಗಳು — ಇವುಗಳಿಗೆ ಬೇಗನೆ ಹುಳು ಬೀಳುತ್ತದೆ.

ಕಡಿಮೆ ಪ್ರಮಾಣದಲ್ಲಿ ತೆಗೆದು, ಸೂರ್ಯನಲ್ಲಿಟ್ಟು ಒಣಗಿಸಿ ನಂತರ ಸಂಗ್ರಹಿಸಿ.

■ ಹಣ್ಣು, ತರಕಾರಿಗಳನ್ನು ಎರಡು ದಿನಗಳಲ್ಲಿ ಮುಗಿಸುವಷ್ಟು ಮಾತ್ರ ತರಿರಿ.

■ ಹಾಲನ್ನು 48 ಗಂಟೆಗಳೊಳಗೆ ಬಳಸಿ.

ಉಳಿದಿದ್ದರೆ ತೆಗೆಯಿರಿ — ಸಂಗ್ರಹಿಸಬೇಡಿ.

*(ಇದು ವ್ಯಾಟ್ಸಪ್ಪ್ ಫಾರ್ವರ್ಡ್)*

## ಬೌದ್ಧಿಕ ಸಿರಿ ಗರುಡನ ಕಂಫರ್ಟ್ ಝೋನ್!

ಒಬ್ಬ ಜ್ಞಾನಿ, ಋಷಿ ರಾಜನೊಬ್ಬನಿಗೆ ಉಡುಗೊರೆಯಾಗಿ ಉತ್ತಮ ತಳಿಯ ಎರಡು ಗರುಡ ಪಕ್ಷಿಗಳನ್ನು ನೀಡಿ, "ಇವು ಎರಡೂ ಶ್ರೇಷ್ಠ ಗರುಡ ಪಕ್ಷಿಗಳು. ಇವುಗಳ ಜೀವನವೇ ಒಂದು ಪಾಠ" ಎಂದ. ರಾಜನು ಪಕ್ಷಿಗಳಿಗೆ ತರಬೇತುದಾರರನ್ನು ನೇಮಿಸಿ ಉತ್ತಮವಾಗಿ ನೋಡಿಕೊಳ್ಳುವಂತೆ ಆದೇಶಿಸಿದ.

ಕಾಲ ಕಳೆದಂತೆ, ಒಂದು ಗರುಡ ಪ್ರತಿದಿನವೂ ಆಕಾಶದ ಎತ್ತರಕ್ಕೆ ಹಾರುತ್ತಿತ್ತು. ಅದು ರೆಕ್ಕೆ ಬಿಡಿಸಿ ಎತ್ತರದಲ್ಲಿ ಹಾರುವಾಗ ನೋಡಲು ಅತ್ಯಂತ ಸುಂದರವಾಗಿ ಕಾಣುತ್ತಿತ್ತು.

ಆದರೆ, ಇನ್ನೊಂದು ಗರುಡ ಅಲ್ಲೇ ಒಂದಷ್ಟು ಸುತ್ತಾಡಿ ಒಂದು ಮರದ ಗೆಲ್ಲಿನ ಮೇಲೆ ಕುಳಿತುಕೊಳ್ಳುತ್ತಿತ್ತು. ಎಷ್ಟೇ ಪ್ರಯತ್ನಿಸಿದರೂ ಅದು ಎತ್ತರಕ್ಕೆ ಹಾರಲು ಮುಂದಾಗಲಿಲ್ಲ.

ರಾಜನಿಗೆ ಚಿಂತೆ ಆಯಿತು. ಅನೇಕ ಪಕ್ಷಿ ತಜ್ಞ ಪಂಡಿತರನ್ನೂ, ವೈದ್ಯರನ್ನೂ ಕರೆಸಿ ತೋರಿಸಿದರೂ ಪ್ರಯೋಜನವಾಗಲಿಲ್ಲ. ಪಕ್ಷಿತಜ್ಞರೆಲ್ಲ ಪ್ರಯತ್ನಿಸಿ ಸೋತುಹೋದರು. ಪರೀಕ್ಷಿಸಿದ ವೈದ್ಯರೂ ಸಹ ಹಕ್ಕಿಗೆ ಯಾವುದೇ ಖಾಯಿಲೆಯಿಲ್ಲವೆಂದು ವರದಿ ನೀಡಿದರು.

ಒಂದು ದಿನ ಹಳ್ಳಿಯ ಒಬ್ಬ ಸಾಮಾನ್ಯ ರೈತ ಅರಮನೆಗೆ ಬಂದ. ಗರುಡ ಪಕ್ಷಿಯನ್ನು ನೋಡಿದ ಅವನು,

"ಮಹಾರಾಜ, ಇದಕ್ಕೆ ಯಾವುದೇ ತೊಂದರೆ ಇಲ್ಲ. ಇದನ್ನು ಹಾರುವಂತೆ ನಾನು ಮಾಡುತ್ತೇನೆ" ಎಂದು ಹೇಳಿದ. ಎಷ್ಟೊಂದು ಮಂದಿ ತಜ್ಞರೇ ಈ ಕಾರ್ಯ ಮಾಡಲು ಸಾಧ್ಯವಾಗಲಿಲ್ಲ. ಈ ಬಡಪಾಯಿ ಮಾಡಿಯಾನು ಎಂದು ಆಸ್ಥಾನದಲ್ಲಿದ್ದರೆಲ್ಲರೂ ಗೊಳ್ಳೆಂದು ನಕ್ಕರು.

ಆದರೆ, ಕೆಲವೇ ಹೊತ್ತಿನಲ್ಲಿ ಎರಡನೇ ಗರುಡ ಪಕ್ಷಿ ಆಕಾಶದೆತ್ತರಕ್ಕೆ ಹಾರುವುದನ್ನು ನೋಡಿದ ಆಸ್ಥಾನದಲ್ಲಿದ್ದವರೆಲ್ಲರೂ ಆಶ್ಚರ್ಯಚಕಿತರಾದರು.

ಇದು ಹೇಗೆ ಸಾಧ್ಯವಾಯಿತು ಎಂದು ರಾಜ ವಿಚಾರಿಸಿದಾಗ, ರೈತ ಹೀಗೆಂದ "ಹಕ್ಕಿಗೆ ಆ ಮರದ ಗೆಲ್ಲಿನ ಮೇಲೆ ಕುಳಿಕೊಂಡಿರುವುದೇ ಆರಾಮದಾಯಕ ಎಂದೆನಿಸಿತ್ತು. ಹಾಗಾಗಿ ಯಾವತ್ತೂ ಆ ಮರದ ಗೆಲ್ಲಿಗೇ ಅವಲಂಬಿಸಿ ಇರುತ್ತಿತ್ತು. ನಾನು ಆ ಗೆಲ್ಲನ್ನೇ ಕಡಿದು ಬಿಟ್ಟೆ. ಆಗ ತಾನು ಅವಲಂಬಿಸಿದ ಆರಾಮದಾಯಕ ವ್ಯವಸ್ಥೆಯೇ ಕುಸಿದಾಗ ನೆಲಕ್ಕೆರಗುವ ಭಯದಿಂದ ತನ್ನ ರೆಕ್ಕೆಗಳನ್ನು ಬಿಚ್ಚಿ ಹಾರಲು ಆರಂಭಿಸಿತು.

ಸ್ವಲ್ಪ ಹೊತ್ತಿನಲ್ಲೇ ಅದು ಮೊದಲ ಗರುಡ ಪಕ್ಷಿಯಷ್ಟೇ ಶಕ್ತಿಶಾಲಿಯಾಗಿ ಆಕಾಶದ ಎತ್ತರಕ್ಕೆ ಹಾರಿಬಿಟ್ಟಿತು" ಎಂದನು.

ಹೌದು, ಸುರಕ್ಷಿತ ವಲಯ (comfort zone) ಇರುವವರೆಗೆ ಹಲವರು ತಮ್ಮ ಸಾಮರ್ಥ್ಯವನ್ನು ಬಳಸುವುದಿಲ್ಲ. ಎತ್ತರಕ್ಕೇರಲು ಕಂಫರ್ಟ್ ಝೋನ್ ನಿಂದ ಹೊರಬರಬೇಕು. ಅವಲಂಬನೆ ಕಳೆದುಕೊಂಡಾಗಲೇ ನೈಜ ಸಾಮರ್ಥ್ಯ ಬೆಳಕಿಗೆ ಬರುತ್ತದೆ.

**ಸಂಕಲನ : ರೊ. ರಾಜೇಶ್ ಡಿ. ಶೆಣೈ**

## ಜನವರಿ 6ರ ಸಭೆಯ ಛಾಯಾಚಿತ್ರಗಳು











## ಕಾರ್ಯದರ್ಶಿಯವರ ವರದಿ

ರೋಟರಿ ಐಸಿರಿಯ 25ನೇ ವಾರದ ಸಭೆ 6/1/2026ರಂದು RCC ಕಾರ್ಯಾಲಯದಲ್ಲಿ ನಡೆಯಿತು. ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಪೂರ್ವಾಧ್ಯಕ್ಷರಾದ ರೊ. ಸ್ಮಿತಾ ಕಾಮತ್ ಅವರು ಅಧ್ಯಕ್ಷತೆ ವಹಿಸಿದ್ದರು.

ರೊ. ಎ. ಗಣೇಶ್ ಅವರು ಪ್ರಾರ್ಥನೆ ನಡೆಸಿದರು.

ರೊ. ಸ್ಮಿತಾ ಜಿ. ಕಾಮತ್ ಅವರು ಎಲ್ಲರನ್ನೂ ಸ್ವಾಗತಿಸಿದರು.

ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ವಾರದ ವರದಿಯನ್ನು ಮಂಡಿಸಿದರು.

ರೊ. ಗುರುಪ್ರಸಾದ್ ಕಾಮತ್ ಅವರು ಜಿಲ್ಲಾ ಗವರ್ನರ್ ಹುದ್ದೆಗೆ ನಡೆಯಲಿರುವ ಚುನಾವಣೆಯ ಬಗ್ಗೆ ಮಾಹಿತಿ ನೀಡಿದರು. RCC ಜಿಲ್ಲಾ ಸಮ್ಮೇಳನದ ಬಗ್ಗೆ ಮಾಹಿತಿ ನೀಡಿದರು. ಜಿಲ್ಲಾ ಗವರ್ನರ್ ಚುನಾವಣೆಯಲ್ಲಿ ನಮ್ಮ ಕ್ಲಬ್ ನ ಮತ ಸರಿಯಾಗಿ ಚಲಾವಣೆಯಾಗಲು ಮಾಡಬೇಕಾದ ಪೂರ್ವ ತಯಾರಿಯ ಬಗ್ಗೆ ಮಾಹಿತಿ ನೀಡಿದರು.

ರೊ. ರಾಜೇಶ್ ಡಿ. ಶೆಣೈ ಅವರು ರಚಿಸಿದ ವಾರದ ಬುಲೆಟಿನ್ ಐಶ್ವರ್ಯವನ್ನು ರೊ. ಸ್ಮಿತಾ ಕಾಮತ್ ಅವರು ಬಿಡುಗಡೆಗೊಳಿಸಿದರು.

2ನೇ ತಾರೀಕಿನಂದು ಹುಟ್ಟುಹಬ್ಬ ಆಚರಿಸಿಕೊಂಡ ರೊ ಪ್ರಭಾಕರ್ ಶೆಟ್ಟಿ ಇವರನ್ನು ಅಭಿನಂದಿಸಲಾಯಿತು

6 ನೇ ತಾರೀಕಿನಂದು ಹುಟ್ಟುಹಬ್ಬ ಆಚರಿಸಿಕೊಂಡ ರೊ. ನಿಧೀಶ್ ಹಾಗೂ ವಿವಾಹ ವಾರ್ಷಿಕೋತ್ಸವ ಆಚರಿಸಿಕೊಂಡ ರೊ. ಸುಕೇಶ್ ಕುಂದರ್ ಅವರಿಗೆ ಅವರ ಅನುಪಸ್ಥಿತಿಯಲ್ಲಿ ಶುಭಾಶಯ ಕೋರಲಾಯಿತು.

ಕೋಶಾಧಿಕಾರಿ ರೊ. ಎ. ಗಣೇಶ್ ಅವರು ಕಳೆದ ತಿಂಗಳ ಆಯವ್ಯಯ ಪಟ್ಟಿಯನ್ನು ಮಂಡಿಸಿದರು. ಅಂತೆಯೇ ಅಧ್ಯಕ್ಷರು DG ಚುನಾವಣೆಯ ಅಭ್ಯರ್ಥಿಗಳು ರೋಟರಿಗೆ ನೀಡಿದ ಕೊಡುಗೆಯನ್ನು ಗಮನಿಸಿ ಮತ ನೀಡಲು ಮತ್ತು ಅದರ ಗೌಪ್ಯತೆಯನ್ನು ಕಾಪಾಡಲು ಕರೆ ನೀಡಿದರು.

ರೊ. ಪ್ರಭಾಕರ್ ಶೆಟ್ಟಿ ಅವರು ಮಾತನಾಡಿ ಹುಟ್ಟುಹಬ್ಬಕ್ಕೆ ಶುಭಾಶಯ ಕೋರಿದ ಎಲ್ಲರನ್ನೂ ವಂದಿಸಿದರು. RCC ಜಿಲ್ಲಾ ಸಮ್ಮೇಳನದಲ್ಲಿ ಭಾಗವಹಿಸುವ ಬಗ್ಗೆ ಪೂರ್ವತಯಾರಿಗಾಗಿ ಜನವರಿ 7 ರಂದು RCC ಸಭೆ ಕರೆಯಲಾಗಿದೆ ಎಂದರು.

ಕ್ಲಬ್ ನ ಕಾರ್ಯಚಟುವಟಿಕೆಗಳು ಉತ್ತಮವಾಗಿ ನಡೆಯಲು ಸಲಹೆ ನೀಡಿದರು.

ರೊ. ಸ್ಮಿತಾ ಜಿ. ಕಾಮತ್ ಅವರು ಅಧ್ಯಕ್ಷೀಯ ಭಾಷಣದಲ್ಲಿ ಮುಂಬರುವ ಪದಾಧಿಕಾರಿಗಳಿಗೆ ತಮ್ಮ ಕರ್ತವ್ಯ ಮತ್ತು ಕಾರ್ಯಾಚರಣೆಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು ಹಿರಿಯ ಸದಸ್ಯರ ಜವಾಬ್ದಾರಿ ಎಂದರು.

ಅದೃಷ್ಟಶಾಲಿ ರೋಟರಿಯನ್ ಆಯ್ಕೆಯನ್ನು ರೊ. ಗೀತಾಶ್ರೀ ಎಂ. ಉಪಾಧ್ಯ ನಡೆಸಿದರು. ಅದೃಷ್ಟಶಾಲಿ ವ್ಯಕ್ತಿಯಾಗಿ ರೊ. ಕೃಷ್ಣಪ್ಪ ಅವರು ಆಯ್ಕೆಗೊಂಡರು.

ಕಾರ್ಯದರ್ಶಿ ಧನ್ಯವಾದ ಸಮರ್ಪಿಸಿದರು.

ರಾಷ್ಟ್ರಗೀತೆಯ ನಂತರ ಸಭೆ ಮುಂದೂಡಲಾಯಿತು.

## "ಐಶ್ವರ್ಯ" 27ನೇ ಸಂಚಿಕೆ ಬಿಡುಗಡೆ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕದ ಇಪ್ಪತ್ತೇಳನೇ ಸಂಚಿಕೆಯನ್ನು ರೊ. PHF. ಸ್ಮಿತಾ ಜಿ. ಕಾಮತ್ 06/01/2026 ರಂದು ಬಿಡುಗಡೆಗೊಳಿಸಿದರು.



ರೋಟರಿ ಐಸಿರಿಯ 25ನೇ ವಾರದ ಸಭೆಯಲ್ಲಿ ಅದೃಷ್ಟಶಾಲಿ ರೋಟೇರಿಯನ್ ಆಯ್ಕೆಯನ್ನು ರೊ. PHF. ಗೀತಾಶ್ರೀ ಎಂ. ಉಪಾಧ್ಯ ನಡೆಸಿ, ರೊ. ಕೃಷ್ಣಪ್ಪ ಅದೃಷ್ಟಶಾಲಿಯಾಗಿ ಆಯ್ಕೆಯಾದರು.




Report upload ಮಾಡುವುದರಲ್ಲಿ ಮೊದಲ ಸ್ಥಾನ ಪಡೆದ ರೋಟರಿ ಐಸಿರಿ, 12/01/2026 ರಂದು ವಲಯ ಪುನರಾವಲೋಕನ ಸಭೆಯಲ್ಲಿ ಗೌರವ ಸ್ವೀಕರಿಸಿದ ರೊ. PHF ಸ್ಮಿತಾ ಕಾಮತ್.